(ಇ) ಹಾಗಿದ್ದಲ್ಲಿ, ಕಾಪು ವಿಧಾನ ಸಭಾ ಕ್ಷೇತ್ರದ ದೊಡ್ಡ ಪಂಚಾಯತ್‌ಗಳಾದ ಶಿರ್ವ, ಪಡುಬಿದ್ರಿ ಗ್ರಾಮ ಪಂಚಾಯತ್‌ನ್ನು ಪಟ್ಟಣ ಪಂಚಾಯತ್‌ನ್ನಾಗಿ ಪರಿವರ್ತನೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೆ?

ಜಿಲ್ಲಾಧಿಕಾರಿಯವರಿಂದ ಪ್ರಸ್ತಾವನೆ ಬಂದಿರುವುದಿಲ್ಲ.

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (257)156

2. ಸದಸ್ಯರ ಹೆಸರು : ಶ್ರೀ ಹೆಚ್.ಪಿ.ಮಂಜುನಾಥ್

(ಶ್ರೀ ಬಸವರಾಜ್ ಬೊಮ್ಮಾಯಿ)

ಅ ಹುಣಸೂರು ತಾಲ್ಲೂಕಿನ ಹಾರಂಗಿ ಬಲದಂಡೆ ನಾಲಾ ವ್ಯಾಪ್ತಿಯಲ್ಲಿ ನಾಲೆ ಸರ್ವೀಸ್ ರಸ್ತೆ ಇತ್ಯಾದಿ ಅಭಿವೃದ್ಧಿ ಕಾಮಗಾರಿಗಳಿಗೆ ಸಂಬಂಧಪಟ್ಟಂತೆ ರಾಷ್ಟ್ರಪತಿ ಆಳ್ವಿಕೆಯ ಕಾಲದಲ್ಲಿ ವಿವಿಧ ಹಂತಗಳಲ್ಲಿ ಮಂಜೂರು ಆದ ಅನುದಾನವೆಷ್ಟು (ಪ್ರತ್ಯೇಕವಾಗಿ ನೀಡುವುದು).

2007–08ನೇ ಸಾಲಿನಲ್ಲಿ ಹುಣಸೂರು ತಾಲ್ಲೂಕಿನ ಹಾರಂಗಿ ಬಲದಂಡೆ ನಾಲೆ. ಸರ್ವೀಸ್ ರಸ್ತೆ ಇತ್ಯಾದಿ ಅಭಿವೃದ್ಧಿ ಕಾಮಗಾರಿಗಳಿಗೆ ರೂ. 14.71 ಕೋಟಿ ಅನುದಾನವನ್ನು, 2008–09ನೇ ಸಾಲಿಗೆ ಹುಣಸೂರು ತಾಲ್ಲೂಕಿನ ಹಾರಂಗಿ ಬಲದಂಡೆ ನಾಲೆ, ಸರ್ವೀಸ್ ರಸ್ತೆ ಇತ್ಯಾದಿ ಅಭಿವೃದ್ಧಿ ಕಾಮಗಾರಿಗಳಿಗೆ ರೂ. 3.66 ಕೋಟಿ ಅನುದಾನವನ್ನು ಹಂಚಿಕೆ ಮಾಡಲಾಗಿರುತ್ತದೆ. ಈ ಅನುದಾನದಡಿಯಲ್ಲಿ ರಾಷ್ಟ್ರಪತಿ ಆಳ್ವಿಕೆಯ ಕಾಲದಲ್ಲಿ ಅಂದರೆ, ನವೆಂಬರ್ – 2007 ರಿಂದ ಮೇ – 2008 ರವರೆಗೆ 306 ಕಾಮಗಾರಿಗಳನ್ನು ಕೈಗೆತ್ತಿಕೊಂಡು ಅವುಗಳಿಗೆ ರೂ.6.645 ಕೋಟಿ ವೆಚ್ಚ ಮಾಡಲಾಗಿರುತ್ತದೆ (ಅನುಬಂಧ–ಅ ನಲ್ಲಿ ವಿವರ ಲಗತ್ತಿಸಿದೆ).

ಆ ಬಿಡುಗಡೆಯಾದ ಅನುದಾನದಿಂದ ಕೈಗೊಂಡ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆಯೇ ಹಾಗೂ ಈ ಕಾಮಗಾರಿಗಳನ್ನು ಟೆಂಡರು ಪ್ರಕ್ರಿಯೆ ಮುಖಾಂತರ ಕೈಗೊಳ್ಳಲಾಗಿದೆಯೇ.

ಈ ಅನುದಾನದಲ್ಲಿ ಕೈಗೊಂಡಿರುವ ಕಾಮಗಾರಿಗಳು ಅನುಮೋದಿತ ಕಾಮಗಾರಿ ಪಟ್ಟಿಯಲ್ಲಿ ಸೇರಿರುತ್ತವೆ. ಹಾಗೂ ಇವುಗಳನ್ನು ಟೆಂಡರ್ ಮುಖಾಂತರ ಕೈಗೆತ್ತಿಕೊಳ್ಳಲಾಗಿದೆ.

ಇ ಹಾಗಿದ್ದಲ್ಲಿ ಅನುಮೋದನೆ ನೀಡಿದ ಆದೇಶ ವಿವರ (ಆದೇಶ ಸಂಖ್ಯೆ:ಕಾಮಗಾರಿಗಳ ವಿವರದ ಪಟ್ಟಿ ಮತ್ತು ಅಂದಾಜು ವೆಚ್ಚ) ಮತ್ತು ಟೆಂಡರ್ ಪ್ರಕ್ರಿಯೆ ವಿವರ? (ಪ್ರಕಟಣೆ ಸಂಖ್ಯೆ) ಮತ್ತು ದಿನಾಂಕ ಕಾಮಗಾರಿವಾರು ಅಂದಾಜು ವೆಚ್ಚಗಳನ್ನು ನೀಡುವುದು.

ಅನುಬಂಧ (ಇ) ನಲ್ಲಿ ವಿವರ ಲಗತ್ತಿಸಿದೆ.

ಈ ಅನುಮೋದನೆಯಾದ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿವೆಯೇ ಹಾಗಿಲ್ಲದಿದ್ದಲ್ಲಿ ಯಾವ ಹಂತದಲ್ಲಿರುತ್ತದೆ?

ಅನುಮೋದನೆಯಾದ 306 ಕಾಮಗಾರಿಗಳ ಪೈಕಿ 207 ಕಾಮಗಾರಿಗಳು ಪೂರ್ಣಗೊಂಡಿದ್ದು, 99 ಕಾಮಗಾರಿಗಳು ಪ್ರಗತಿಯಲ್ಲಿದೆ. ಅನುಬಂಧ (ಈ) ನಲ್ಲಿ ವಿವರ ಲಗತ್ತಿಸಿದೆ.

ಉ ಕಾಮಗಾರಿಯ ಗುಣಮಟ್ಟವನ್ನು ಕಾಪಾಡಲು ಸರ್ಕಾರ ಯಾವ ಮಾನದಂಡಗಳನ್ನು ನಿಗದಿಪಡಿಸಿದೆ ಅದೇ ರೀತಿ ಕಾಮಗಾರಿಯನ್ನು ಮಾಡಲಾಗಿದೆಯೇ: ಹಾಗಿಲ್ಲದಿದ್ದಲ್ಲಿ ಅಂತಹ ಗುತ್ತಿಗೆದಾರರ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು?

ಕಾಮಗಾರಿಗಳನ್ನು ವಿಶಿಷ್ಟ ವಿವರಣೆಗಳಂತೆ ನಿರ್ವಹಿಸುವುದು ಆದ್ಯ ಕರ್ತವ್ಯವಾಗಿದ್ದು, ಇದನ್ನು ಖಾತರಿಪಡಿಸುವುದು ಪ್ರಮುಖವಾಗಿ ಅನುಷ್ಠಾನಾಧಿಕಾರಿಗಳಾದ ಸಹಾಯಕ ಇಂಜಿನಿಯರ್/ಸಹಾಯಕ ಕಾರ್ಯಪಾಲಕ ಇಂಜಿನಿಯರ್/ಕಾರ್ಯಪಾಲಕ ಇಂಜಿನಿಯರ್‌ಗಳ ಹೊಣೆಯಾಗಿದ್ದು, ಇವುಗಳನ್ನು ಸಮಂಜಸವಾಗಿ ಅನುಷ್ಠಾನವಾಗುವಂತೆ ನೋಡಿಕೊಳ್ಳುವುದು. ಅಧೀಕ್ಷಕ ಅಭಿಯಂತರರ ಹಾಗೂ ಮುಖ್ಯ ಇಂಜಿನಿಯರ್ ರವರ ಹೊಣೆಯಾಗಿರುತ್ತದೆ. ಅಲ್ಲದೆ, ಇವರಿಗೆ ಪೂರಕವಾಗಿ ಗುಣಮಟ್ಟ ಕಾಪಾಡಲು ಗುಣನಿಯಂತ್ರಣ ವಿಭಾಗದ ಇಂಜಿನಿಯರ್‌ಗಳು ಸಹಾ ಇರುತ್ತಾರೆ. ಗುಣಮಟ್ಟದಲ್ಲಿ ನ್ಯೂನತೆಗಳು ಕಂಡುಬಂದರೆ ತಕ್ಷಣ ವರದಿ ಮಾಡಿ ಸರಿಪಡಿಸಲು ಕ್ರಮ ಕೈಗೊಳ್ಳುವುದೂ ಸೇರಿದಂತೆ ಉತ್ತಮ ಗುಣ ಮಟ್ಟದ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವುದು ಇವರುಗಳ ಜವಾಬ್ದಾರಿಯಾಗಿರುತ್ತದೆ. ಇವರ ಕಾರ್ಯವೈಖರಿ ಹಾಗೂ ವಿನ್ಯಾಸದಂತೆ ಕಾಮಗಾರಿಯನ್ನು ಅನುಷ್ಠಾನಗೊಳಿಸುತ್ತಿರುವುದನ್ನು ವೀಕ್ಷಿಸಿ ಕ್ರಮ ಕೈಗೊಳ್ಳುವುದು, ನ್ಯೂನತೆಗಳಿದ್ದಲ್ಲಿ ಅಧೀಕ್ಷಕ ಅಭಿಯಂತರರ ಮಟ್ಟದ ಅಧಿಕಾರಿಗಳಿಂದ ವ್ಯವಸ್ಥಾಪಕ ನಿರ್ದೇಶಕರವರಿಗೆ ನೇರವಾಗಿ ವರದಿ ಮಾಡಲು ವ್ಯವಸ್ಥೆ ಇರುತ್ತದೆ. ಅದರಂತೆ, ಕಾಮಗಾರಿಗಳನ್ನು ಕೈಗೊಳ್ಳುತ್ತಿದ್ದು, ಇಂತಹ ಪ್ರಕರಣಗಳು ವರದಿಯಾಗಿರುವುದಿಲ್ಲ.

1) ಚುಕ್ಕೆ ಗುರುತಿಲ್ಲದ ಪ್ರ.ಸಂ.	:	(254)157
2) ಸದಸ್ಯರ ಹೆಸರು	:	ಶ್ರೀ ಮುನಿಯಪ್ಪ .ವಿ
3) ಉತ್ತರಿಸುವ ಸಚಿವರು	:	(ಶ್ರೀ ಗೋವಿಂದ ಎಂ.ಕಾರಜೋಳ) ಮಾನ್ಯ ಸಣ್ಣ ನೀರಾವರಿ ಯೋಜನೆ ಮತ್ತು ಸಾಂಖ್ಯಿಕ ಸಚಿವರು